ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸೇಂದಿವನದ ಕುರಿತು

2091 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಸೇಂದಿವನದ ವಿಸ್ತೀರ್ಣ ಎಷ್ಟು?*

2) *ಇದು ಈಗಾಗಲೇ ಅನಧಿಕೃತ ಸಾಗುವಳಿ ಯಾಗುತ್ತಿದ್ದು ಸುಮಾರು ವರ್ಷಗಳು ಕೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಅದನ್ನು ಮಂಜೂರು ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು? ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

1) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸೇಂದಿವನದ ಜಮೀನು 21400.26 ಎಕರೆ ವಿಸ್ತೀರ್ಣ ಇರುತ್ತದೆ.

2) ಬಂದಿರುತ್ತದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಮೋಟಾರು ವಾಹನಗಳ ಜೀವಾವಧಿ ತೆರಿಗೆ

2092 - ಶ್ರೀ ಮಹಂತೇಶ್ ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಮೋಟಾರು ವಾಹನಗಳಿಗೆ ಜೀವಾವಧಿ ತೆರಿಗೆಯನ್ನು ವಸೂಲು ಮಾಡುತ್ತಿರುವುದರಿಂದ 1995-96, 1996-97ನೇ ಸಾಲಿನಲ್ಲಿ ಸರ್ಕಾರಕ್ಕೆ ಎಷ್ಟು ಹಣ ಸಂದಾಯವಾಗಿದೆ?*

ಆ) *ಈ ಜೀವಾವಧಿ ತೆರಿಗೆಯನ್ನು ವಸೂಲು ಮಾಡುತ್ತಿರುವುದರಿಂದ ಮಧ್ಯಮ ವರ್ಗದ ಜನರಿಗೆ ಅನಾನುಕೂಲವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಮೊದಲಿನಂತೆ ಪ್ರತಿ ವರ್ಷ ತೆರಿಗೆ ವಸೂಲು ಮಾಡಲು ಸರ್ಕಾರವು ಕೈಗೊಳ್ಳುವುದೆ?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) 1995-96 ರೂ. 1,05,90,89,397-00
1996-97 ರೂ. 57,42,55,833-00

ಆ) -ಇಲ್ಲ-

ಇ) ಉದ್ಭವಿಸುವುದಿಲ್ಲ.